# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಸಿ.ಸಿ 8816-2022** **ಸಿ. ಡಬ್ಲುಃ 01**

**ಪಿ ಡಬ್ಲುಃ 01**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ | ಮಧುಕೇಶ್ವರ ಹೆಚ್.ಎಂ<br>ಮಲ್ಲು ಹೆಚ್.ಎಂ<br>39 ವರ್ಷ<br>ಅಬಕಾರಿ ಮುಖ್ಯ ಪೇದೆ, ನಂಜನಗೂಡು ವಲಯ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 26-06-2024** |

**ಮುಖ್ಯ ವಿಚಾರಣೆಃ ಶ್ರೀ ಎಪಿಪಿ ವಕೀಲರಿಂದಃ**

ನಾನು 2017 ರಿಂದ 2021 ವರೆಗೆ ನಾನು ನಂಜನಗೂಡು ಅಬಕಾರಿ ನೀರಿಕ್ಷಕರ ಕಚೇರಿಯಲ್ಲಿ ಅಬಕಾರಿ ರಕ್ಷಕನಾಗಿ, ಹಾಗೂ 2021 ರಿಂದ ಇಲ್ಲಿಯವರೆಗೆ ಅಬಕಾರಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ.28-05-2021 ರಂದು ಚಾಸಾ-8 ರವರ ನೇತೃತ್ವದಲ್ಲಿ ನಾನು ಮತ್ತು ಚಾಸಾ-2,3 ಮತ್ತು ಬಾಹ್ಯ ಮೂಲದ ವಾಹನ ಚಾಲಕನೊಂದಿಗೆ ಸರ್ಕಾರಿ ವಾಹನ ಸಂ. ಕೆಎ-09-ಜಿ-629 ರಲ್ಲಿ ನಂಜನಗೂಡು ವಲಯದಲ್ಲಿ ಬೆಳಗ್ಗೆ 9.30 ಗಂಟೆ ಸಮಯದಲ್ಲಿ ನಂಜನಗೂಡು-ಹುಲ್ಲಹಳ್ಳಿ ರಸ್ತೆಯಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ದೇಬೂರು ಗ್ರಾಮದ ಬಸವೇಶ್ವರ ದೇವಸ್ಥಾದ ಬಳಿ ಒಬ್ಬ ಆಸಾಮಿ ಹೋಂಡಾ ಆಕ್ಟೀವಾ 5 ಜಿ ಕಂದುಬಣ್ಣದ ದ್ವಿಚಕ್ರ ವಾಹನದಲ್ಲಿ ಎಂದು ಬಿಳಿ ಚೀಲವನ್ನು ಇಟ್ಟುಕೊಂಡು ಹೋಗುತ್ತಿದ್ದು ಸಮವಸ್ತ್ರಧಾರಿಗಳಾದ ನಮ್ಮನ್ನು ಕಂಡು ಗಾಭರಿಗೊಂಡನು ನಂತರ ಆ ವ್ಯಕ್ತಿಗೆ ಬಿಳಿ ಪ್ಲಾಸ್ಟೀಕ್ ಚೀಲದಲ್ಲಿ

ಇರುವುದು ಏನು ಎಂದು ಕೇಳಲಾಗಿ ಆತ ತಡವರಿಸುತ್ತಾ ಮದ್ಯದ ಬಾಕ್ಸ್ ಗಳು ಇರುವುದಾಗಿ ತಿಳಿಸಿದನು. ನಂತರ ಸದರಿ ದ್ವಿಚಕ್ರ ವಾಹನ ಮತ್ತು ಬಿಳಿ ಪ್ಲಾಸ್ಟೀಕ್ ಚೀಲದಲ್ಲಿ ಇರುವುದನ್ನು ಶೋಧನೆ ಮಾಡುವ ಸಲುವಾಗಿ ಘಟನಾ ಸ್ಥಳದಲ್ಲಿ ಇದ್ದು ಸ್ಥಳಿಕರನ್ನು ಬರಮಾಡಿಕೊಂಡು ಕೃತ್ಯ ವಿಷಯವನ್ನು ತಿಳಿಸಿ ಪಂಚರಾಗಬೇಕೆಂದು ಕೇಳಿಕೊಂಡಾಗ ಅವರ ನಿರಾಕರಿಸಿದ ಕಾರಣ ನಮ್ಮ ಇಲಾಖಾ ಸಿಬ್ಬಂದಿಗಳಾದ ನಮ್ಮನ್ನೇ ಪಂಚರನ್ನಾಗಿ ಮಾಡಿಕೊಂಡು ಚೀಲ ಮತ್ತು ಮೋಟಾರ್ ಸೈಕಲ್ ಅನ್ನು ಪರೀಶಿಲನೆ ಮಾಡಲು ನ್ಯಾಯಾಲಯದಿಂದ ಶೋಧನಾ ಸಮುಚಿತವನ್ನು ತರಲು ಸಮಯ ಇಲ್ಲ ಕಾರಣ ಚಾಸಾ-8 ರವರು ತನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸ್ಥಳದಲ್ಲಿಯೇ ಶೊಧನಾ ವಾರೆಂಟ್ ತಯಾರಿಸಿ ನಂತರ ಸದರಿ ಚೀಲವನ್ನು ತೆರೆದು ನೋಡಲಾಗಿ ಪ್ಲಾಸ್ಟೀಕ್ ಚೀಲದ ಒಳಗೆ 2 ರಟ್ಟಿನ ಪೆಟ್ಟಿಗೆಗಳು ಕಂಡು ಬಂದವು, 1 ನೇ ರಟ್ಟಿನ ಪೆಟ್ಟಿಗೆಯಲ್ಲಿ 90 ಎಂ.ಎಲ್ ನ 96 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಮದ್ಯದ ಟೆಟ್ರಾಪ್ಯಾಕ್ ಗಳು ಮತ್ತು 2 ನೇ ಪೆಟ್ಟಿಗಳೆಯಲ್ಲಿ 180 ಎಂ.ಎಲ್ ನ 48 ಬ್ಯಾಗ್ ಪೈಬರ್ ಡಿಲಕ್ಸ್ ವಿಸ್ಕಿಯ ಮದ್ಯದ ಟೆಟ್ರಾಪ್ಯಾಕ್ ಗಳು ಇದ್ದು, ಅವುಗಳ ಒಟ್ಟು ಪ್ರಮಾಣ 17.280 ಆಗಿದ್ದು, ಅವುಗಳ ಮೌಲ್ಯ ರೂ.8,488/- ಆಗಿರುತ್ತದೆ. ನಂತರ ದ್ವಿಚಕ್ರ ವಾಹನವನ್ನು ಪರಿಶೀಲನೆ ಮಾಡಲಾಗಿ ಕೆಎ-09-ಹೆಚ್.ಡಬ್ಲೂ-1336 ಹೋಂಡಾ ಆಕ್ಟೀವಾ 5 ಜಿ ಕಂದು ಬಣ್ಣ ದ್ವಿಚಕ್ರ ವಾಹನವಾಗಿತ್ತು. ಸದರಿ ಆಸಾಮಿಗೆ ಮದ್ಯವನ್ನು ಹೊಂದಲು ಯಾವುದಾದರೂ ಬಿಲ್ ಅಥವಾ ಪರವಾನಗಿ ಇದೆಯೇ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿದ್ದು ಹಾಗೂ ಅದನ್ನು ಯಾವ ಉದ್ದೇಶಕ್ಕಾಗಿ ಸಾಗಾಣಿಕೆ ಮಾಡುತ್ತಿರುವೆ ಎಂದು ಮತ್ತು ಎಲ್ಲಿಂದ ತಂದಿರುವ ಎಂದು ಕೇಳಲಾಗಿ ಸದರಿ ಆಸಾಮಿಯೂ ತಾನು ದೇಬೂರು ನಿವಾಸಿಯಾಗಿದ್ದು, ಪಾನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದನು. ಸದರಿ ಆಸಾಮಿ ಹೆಸರು ವಿಳಾಸ ಕೇಳಲಾಗಿ ಆತ ರವಿ ಬಿನ್ ವೆಂಕಟರಾಜು ದೇಬೂರು ಗ್ರಾಮ, ನಂಜನಗೂಡು ತಾಲ್ಲೂಕು ಎಂದು ತಿಳಿಸಿದ. ನಿಗದಿತ

ಮಿತಿಗಿಂತ ಹೆಚ್ಚಿನ ಮದ್ಯವನ್ನು ಹೊಂದಿ ಈ ರೀತಿ ಅಕ್ರಮವಾಗಿ ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದಯಿ ಶಿಕ್ಷಾರ್ಹ ಅಪರಾಧ ಎಂದು ಆಸಾಮಿಗೆ ತಿಳಿಸಿ, ಆತನನ್ನು ದಸ್ತಗಿರಿ ಮಾಡಲಾಯಿತು. ನಂತರ ದೂರೆತ ಎಲ್ಲಾ ಮದ್ಯದ ಟೆಟ್ರಾಪ್ಯಾಕುಗಳ ಪೈಕಿ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 15 ಮದ್ಯದ ಟೆಟ್ರಾಪ್ಯಾಕ್ ಗಳು ಹಾಗೂ ಬ್ಯಾಗ್ ಫೈಬರ್ ಡಿಲಕ್ಸ್ ವಿಸ್ಕಿಯ 10 ಮದ್ಯದ ಟೆಟ್ರಾಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗೆಂದು ಮಾದರಿ ತೆಗೆದು, ಸಣ್ಣ ಚೀಟಿಯಲ್ಲಿ ಮೊಕದ್ದಮೆ ವಿವರ ಬರೆದು ಅವುಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ದಾರ ಕಟ್ಟಿ ಅರಗಿನಿಂದ ಸೀಲ್ ಮಾಡಲಾಯಿತು. ನಂತರ ದೊರೆತ ಮದ್ಯ ಹಾಗೂ ಆರೋಪಿಯನ್ನು ಇಲಾಖಾ ವಶಕ್ಕೆ ಪಡೆದು, ಠಾಣೆಗೆ ಕರೆತಂದು ಆತನ ವಿರುದ್ಧ ಚಾಸಾ–8 ರವರು ಪ್ರಕರಣವನ್ನು ದಾಖಲಿಸಿರುತ್ತಾರೆ. ಘಟನಾ ಸ್ಥಳದಲ್ಲಿ ಮಹಜರ ಕ್ರಮವನ್ನು ಬೆಳಗ್ಗೆ 9.30 ರಿಂದ 10.30 ಗಂಟೆಯವರೆಗೂ ಜರುಗಿಸಲಾಯಿತು. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿದ್ದು ಅದು ಸ್ಥಳ ಮಹಜರ್ ಆಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಿಪಿ–1 ಅನ್ನು ಚಾಸಾ–8 ರವರ ಉಕ್ತಲೇಖನದಂತೆ ನಾನೇ ಬರೆದಿರುತ್ತೇನೆ. ಸಾಕ್ಷಿಯು ಮಾದರಿ ಸೀಲಿನ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಎಂದು, ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಲೀಸ್ಟ್ ಅಫ್ ಅರ್ಟಿಕಲ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು, ಸಾಕ್ಷಿ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನಾ ದಿನದಂದು ಅಮಾನತ್ತು ಪಡಿಸಿಕೊಳ್ಳಲಾದ ಮದ್ಯ ಟೆಟ್ರಾಪ್ಯಾಕುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ–1 ರಿಂದ 25 ಎಂದು, ಪ್ಲಾಸ್ಟೀಕ್ ಚೀಲವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ–26 ಎಂದು ಗುರುತಿಸಲಾಯಿತು. ಸಾಕ್ಷಿಯು

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಪ್ರಕರಣ ಸಂಬಂಧ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

(ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**